

ಕೂಸುಗಳಿಗೆ ಗ್ರ್ಯಾಜುಯೇಶನ್ ಡೇ ಭಾಗ್ಯ! ಎಲ್ಲಾ ಕಾಸಿನ ಮಹಿಮೆ. ಹಿಂದೆ, ಹದಿನೈದು ಹದಿನಾರು ವರ್ಷಗಳ ವಿದ್ಯಾಭ್ಯಾಸಕ್ಕೆ ತಗುಲುತ್ತಿದ್ದ ವೆಚ್ಚಕ್ಕಿಂತ ಹೆಚ್ಚು ಹಣವನ್ನು ಇಂದು ಮಾಂಟೆಸರಿಗೇ ಸುರಿದ ಮೇಲೆ ಈ ಎಲ್ಲಾ ಡೌಲುಗಳಿಲ್ಲದಿದ್ದರೆ ಹೇಗೆ? ಪೋಷಕರನ್ನು ಪ್ಲೀಸ್ ಮಾಡಲು ಆಡಳಿತ ವರ್ಗಕ್ಕೆ ಇದೊಂದು ಸದವಕಾಶ, ಹೆತ್ತವರಿಗೂ ಮಕ್ಕಳನ್ನು ಆ ದಿರಿಸಿನಲ್ಲಿ ಕಣ್ತುಂಬಿಕೊಳ್ಳುವ ಸುಯೋಗ.

ಪದವಿ ಎಂದರೆ ಕಾಲೇಜು ಅಥವಾ ವಿಶ್ವವಿದ್ಯಾಲಯ ತಾನು ನಿಷ್ಕರ್ಷಿಸಿರುವ ಪಠ್ಯಕ್ರಮವನ್ನು ಯಶಸ್ವಿಯಾಗಿ ವ್ಯಾಸಂಗ ಮಾಡಿ ಪಾರಂಗತರಾದವರಿಗೆ ನೀಡುವ ಪ್ರಶಸ್ತಿ. ಇದು ಗ್ರ್ಯಾಜುಯೇಶನ್ನಿನ ಓಲ್ಡ್ ಡೆಫಿನಿಷನ್. ಹತ್ತೊಂಬತ್ತನೇ ಶತಮಾನದ ಮಧ್ಯದಲ್ಲಿ ಜೊದ್ದುನಾಥ ಬೋಸ್ ಹಾಗೂ ಬಂಕಿಮ್ ಚಂದ್ರ ಚಟರ್ಜಿ ದೇಶದ ಮೊದಲ ಪದವಿಯ ಪ್ರಶಸ್ತಿಗೆ ಭಾಜನರಾದರೆ, ಚಂದ್ರಮುಖಿ ಬಸು ಹಾಗೂ ಕಾದಂಬಿನಿ ಬಸು ಮಹಿಳೆಯರಲ್ಲಿ ಈ ಗೌರವಕ್ಕೆ ಪಾತ್ರರಾದವರಲ್ಲಿ ಮೊದಲಿಗರು. ಕ್ಯಾಲಿಫೋರ್ನಿಯಾದ ಹದಿಮೂರು ವರ್ಷದ ಜಾಕ್ ರಿಕೋ, ವಿಶ್ವವಿದ್ಯಾಲಯದ ಡಿಗ್ರಿ ಪಡೆದ ಮೊದಲ ಕಿರಿಯ ವಿದ್ಯಾರ್ಥಿ ಎಂದು ದಾಖಲಾಗಿದೆ. ಆದರೆ ಇಂದು 'ದೇರ್ ಈಸ್ ನೋ ಡೆಫಿನಿಷನ್ ಆಫ್ ಗ್ರ್ಯಾಜುಯೇಶನ್, ಇಟ್ ಲೈಸ್ ಇನ್ ದ ಹ್ಯಾಂಡ್ಸ್ ಆಫ್ ದ ಗಿವರ್.'

ನಾವೆಲ್ಲಾ ಪದವಿಯಲ್ಲಿದ್ದಾಗ ಆರ್ಥಿಕ ತೊಂದರೆ, ಮದುವೆ ಮುಂತಾದ ಕಾರಣಗಳಿಂದ ಅರ್ಧದಷ್ಟು ವಿದ್ಯಾರ್ಥಿಗಳು ಮಧ್ಯದಲ್ಲಿ 'ಡ್ರಾಪ್ ಔಟ್' ಆದರೆ ಪದವಿ ಪೂರೈಸಿದ ಬೆರಳೆಣಿಕೆಯವರೂ, ಅದರಲ್ಲೂ ಮಹಿಳೆಯರು 'ಗ್ರ್ಯಾಜುಯೇಶನ್ ಡೇ' ಅಷ್ಟರಲ್ಲಿ ಬಸಿರು–ಬಾಣಂತನ ಎನ್ನುತ್ತಾ ಗೈರಾಗುತ್ತಿದ್ದರು. ಬರುವ ಅಡಚಣೆಗಳನ್ನು ಎಡವುತ್ತಾ ಅನಿವಾರ್ಯಗಳನ್ನು ತಡವುತ್ತಾ ಪ್ರತಿಕೂಲ ಪರಿಸ್ಥಿತಿಯಲ್ಲೂ ಗುರಿ ಮುಟ್ಟಿದ ಕೆಲವೇ ಕೆಲವು ವಿದ್ಯಾರ್ಥಿಗಳು ಕಾನ್ವೊಕೇಶನ್ ಗರಿಯನ್ನು ಮುಡಿಗೇರಿಸಿಕೊಳ್ಳುತ್ತಿದ್ದರು. ಬಹಳ ಹಿಂದೆ ನಮ್ಮ ಪೂರ್ವಜರ ಕಾಲದಲ್ಲಿ ಗ್ರ್ಯಾಜುಯೇಟ್ ಆದವರಿಗೆ ಮೈಸೂರು ಮಹಾರಾಜರು ಶೇಕ್ ಹ್ಯಾಂಡ್ ಮಾಡ್ತಿದ್ದರಂತೆ. ಆಗ ನಾಡಿನಾದ್ಯಂತ ಬೆರಳೆಣಿಕೆಯಷ್ಟು ಪದವೀಧರರಿದ್ದರಿಂದ, ಅವರುಗಳು ಆ ಒಂದು ಗೌರವಕ್ಕೆ ಭಾಜನರಾಗುತ್ತಿದ್ದರು. ಆ ಪದ್ಧತಿ ಮುಂದುವರಿಯದೆ ಇಂದು ಚಿಣ್ಣರ ಕೈಕುಲುಕುವ ಭಾಗ್ಯದಿಂದ ಮಹಾರಾಜರು ವಂಚಿತರಾದರು.

ಮಗಳೊಂದಿಗೆ 'ಗ್ರ್ಯಾಜುಯೇಶನ್ ಡೇ'ಗೆ ಹೋದಾಗ ಅಲ್ಲಿ ಗಂಧರ್ವ ಲೋಕವೇ ಸೃಷ್ಟಿಯಾಗಿತ್ತು. ನಾಲ್ಕೈದು ವರ್ಷದ ಕೂಸುಗಳೆಲ್ಲಾ ಗ್ರ್ಯಾಜುಯೇಶನ್ ಗೌನ್, ಮಿನಿ ಮಾರ್ಟರ್ ಬೋರ್ಡ್‌ನಲ್ಲಿ (ಕ್ಯಾಪ್‌ನಲ್ಲಿ) ಭವಿಷ್ಯದ ಭರವಸೆಯ ಮಿನಿಯೇಚರ್‌ಗಳಂತೆ ಕಾಣುತ್ತಿದ್ದವು. ಅವರ ಸಂತೂರ್ ಮಮ್ಮಿಯರೆಲ್ಲಾ ಸ್ಕರ್ಟ್, ಪ್ಯಾಂಟ್‌ಗಳಲ್ಲಿ ಪಾದರಸದಂತೆ ಪುಟಿಯುತ್ತಿದ್ದರು. ಪಾಶ್ಚಿಮಾತ್ಯ ಶೈಲಿಗೆ ಪ್ರಭಾವಿತವಾದ ಸಂಕ್ಷಿಪ್ತ ವಿಶ್ವವೇ ಅಲ್ಲಿ ತೆರೆದುಕೊಂಡಿತ್ತು.

ಎಲ್ಲರನ್ನೂ ಸ್ವಾಗತಿಸಿದ ನಂತರ ಆಧುನಿಕ ಔಟ್ ಫಿಟ್‌ನಲ್ಲಿದ್ದ ಲೇಡಿ ಒಬ್ಬರು ಗ್ರ್ಯಾಜುಯೇಶನ್ ದಿನದ ಉದ್ದೇಶವನ್ನು ವಿವರಿಸಿದರು. ಅಮೆರಿಕದಲ್ಲಿ ಐವತ್ತು ಅರವತ್ತು ವರ್ಷಗಳಿಂದ ಚಾಲ್ತಿಯಲ್ಲಿರುವ ಈ ಪದ್ಧತಿ ಕಳೆದೊಂದು ದಶಕದಿಂದ ಭಾರತಕ್ಕೂ ಕಾಲಿರಿಸಿದೆ. ಇದು ಮಕ್ಕಳ ಶೈಕ್ಷಣಿಕ ಪಯಣದ ಮೊದಲ ಮೈಲಿಗಲ್ಲಾಗಿದ್ದು, ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸಿ ಸಕಾರಾತ್ಮಕ ಅನುಭವವನ್ನು ನೀಡುವ ಬಗ್ಗೆ ವಿವರಿಸಿದರು. ಮ್ಯೂಸಿಕ್, ಡ್ಯಾನ್ಸ್, ಸ್ಕಿಟ್‌ಗಳೆಲ್ಲಾ ಸೊಗಸಾಗಿದ್ದವು.

ಕಾರ್ಯಕ್ರಮದ ಮುಖ್ಯ ಘಟ್ಟ ಪದವಿ ಪ್ರದಾನ. ಪಾಪ್ ಮ್ಯೂಸಿಕ್‌ನೊಂದಿಗೆ ಪ್ರತಿ ಕೂಸನ್ನೂ ಕರೆದು ಟ್ಯಾಸೆಲ್ಸ್ ಹಾಗೂ ಡಿಪ್ಲೊಮಾದೊಂದಿಗೆ (ಗ್ರ್ಯಾಜುಯೇಶನ್ ಸರ್ಟಿಫಿಕೇಟ್ ಅಭಿನಂದಿಸಿದಾಗ ಹೆತ್ತವರ ಕಣ್ಣಲ್ಲಿ ಆನಂದಬಾಷ್ಪ. ನಂತರ ಮ್ಯಾಮ್‌ಗಳು ಹಾಗೂ ಮೆಂಟರ್ಸ್ ಪ್ರತಿ ಮಗುವಿನ ವಿಶೇಷತೆಯನ್ನು, ಪ್ರತಿಭೆಯನ್ನು ಕೊಂಚ ವೈಭವೀಕರಿಸಿ ಹೊಗಳಿಕೆಯ ವ್ಯವಹಾರ ಕುಶಲತೆ ಮೆರೆದರು. ಸಂತೋಷಗೊಂಡ ಪೋಷಕರು ಶಾಲೆಯ ಆಡಳಿತ ವರ್ಗ ಹಾಗೂ ಶಿಕ್ಷಕಿಯರನ್ನು ತುಂಬು ಮನದಿಂದ ಅಭಿನಂದಿಸಿದರು. ಹೊಗಳಿಕೆಗೆ ಭಾಜನರಾದ ಎಲ್ಲರ ಹೃದಯವೂ ಆರ್ದ್ರವಾಗಿತ್ತು. ಎಲ್ಲರಿಗೂ ಡಿನ್ನರ್ ಅರೇಂಜ್ ಆಗಿತ್ತು. ತಮ್ಮ ಕೂಸುಗಳ ಪದವಿ ಪ್ರದಾನದ ಭಾವನಾತ್ಮಕ ಕ್ಷಣಗಳನ್ನು ಕಣ್ತುಂಬಿಕೊಂಡಿದ್ದ 'ಸಂತೂರ್ ಮಮ್ಮಿ'ಯರು ಚಮಚ ಹಾಗೂ ಫೋರ್ಕ್‌ಗಳಿಂದ ತಿನಿಸುಗಳನ್ನು ಕೆದಕುತ್ತಿದ್ದರೆ, ಇನ್ನೂ ಆಧುನಿಕತೆಗೆ ಸಂಪೂರ್ಣವಾಗಿ ತೆರೆದುಕೊಳ್ಳದ ಕೆಲವು ಅಪ್ಪಂದಿರು ಯಾವ ಮುಜುಗರವೂ ಇಲ್ಲದೆ ಸಮೃದ್ಧವಾಗಿ ಮೇಯುತ್ತಿದ್ದರು. ಗ್ರ್ಯಾಜುಯೇಶನ್ ಅಟ್ಟೈರ್‌ನಲ್ಲಿ ಪದವಿಯ ಮುಂಗಡ ಪತ್ರಗಳನ್ನು ಹಿಡಿದು ಅಡ್ಡಾಡುತ್ತಿದ್ದ ಕೂಸುಗಳ ಮುಗ್ಧತೆಯನ್ನು ಕಣ್ತುಂಬಿಕೊಳ್ಳುತ್ತಾ ಹೊಸ ಪರಿಸರದ ಹೊಸ ಅನುಭವದೊಂದಿಗೆ ಮನೆಗೆ ಹಿಂದಿರುಗಿದೆ.

ಬದಲಾವಣೆ ಜಗದ ನಿಯಮ. ಮಾನವನ ಜೀವನಶೈಲಿ, ರೀತಿ ನೀತಿಗಳು ಬದಲಾದಂತೆ ಭಾಷೆ–ಸಂಸ್ಕೃತಿಯೂ ಪರಿಷ್ಕರಣೆಗೊಳ್ಳುವುದು. ಹೀಗೆ ಕೆಲವು ಪದಗಳೂ ತಮ್ಮ ಅರ್ಥ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದರಲ್ಲಿ ಅಚ್ಚರಿಯಿಲ್ಲ. ವಿಶ್ವವಿದ್ಯಾಲಯದ ಪದವಿಗಳಂತೆ 'ಪ್ರೀ ಸ್ಕೂಲ್' ಪದವಿಯೂ ಶೈಕ್ಷಣಿಕ ಪಯಣದ ಮೊದಲ ಮೈಲುಗಲ್ಲಾಗಿ ಸ್ಥಾನ ಪಡೆದಿದೆ. ನಮ್ಮ ಹಿಂದಿನ ಶಿಕ್ಷಣದ ಮೈಲುಗಲ್ಲುಗಳೆಲ್ಲಾ ಬಣ್ಣ ಕಳೆದುಕೊಂಡು ಕುಸಿದು ಬಿದ್ದಿವೆ. 'ಕೆಲವರು ಹುಟ್ಟಿನಿಂದಲೇ ಮಹಾನ್ ಆಗಿರುತ್ತಾರೆ, ಇನ್ನು ಕೆಲವರು ಪರಿಶ್ರಮದಿಂದ ಮಹತ್ವ ಗಳಿಸುತ್ತಾರೆ, ಇನ್ನು ಕೆಲವರ ಮೇಲೆ ಮಹತ್ವವನ್ನು ಹೇರಲಾಗುತ್ತದೆ' ಎನ್ನುವ ಶೇಕ್ಸ್‌ಪಿಯರ್ ನುಡಿಗಳು ನೆನಪಾದವು.

ಪ್ರತಿಕ್ರಿಯಿಸಿ: **feedback@sudha.co.in**